<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ</u>

# C.C.No.1782/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಂದೀಶ | CW-02 |
| ತಂದೆಯ /ಗಂಡನ ಹೆಸರು | : | ಶಿವಪ್ಪ | PW-01 |
| ವಯಸ್ಸು | : | 26 ವರ್ಷ | - |
| ಉದ್ಯೋಗ | : | CPC-618 | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **21.04.2023.** |
| ವಾಸಸ್ಥಳ | : | ಸರಗೂರು | - |

**<u>ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ</u>**

ನಾನು ಸರಗೂರು ಪೊಲೀಸ್ ಠಾಣೆಯಲ್ಲಿ ದಿನಾಂಕ 17.01.2021 ರಿಂದ ಪ್ರಸ್ತುತ ಇಲ್ಲಿಯವರೆಗೆ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿರುತ್ತೇನೆ. ದಿನಾಂಕ 27.04.2021 ರಂದು ಚಾಸಾ-10 ರವರು ನನ್ನನ್ನು ಮತ್ತು ಚಾಸಾ-1 ಗ್ರಾಮ ಗಸ್ತಿಗೆ ನೇಮಿಸಿದ್ದು ಅದರಂತೆ ಸರಗೂರು ಪಟ್ಟಣ, ಬಡಗಲಪುರ, ಹಾದನೂರು ಕಡೆಗೆ ಗಸ್ತು ಮಾಡಿ ಸಂಜೆ 4.00 ಗಂಟೆ ಸಮಯಕ್ಕೆ ಯಶವಂತಪುರ ಗ್ರಾಮದ ಕಡೆಗೆ ಗಸ್ತು ಹೋಗುತ್ತಿದ್ದಾಗ ಯಶವಂತಪುರ ಬಸ್ಸ ನಿಲ್ದಾಣದ ಪಕ್ಕದಲ್ಲಿ ಹಾದಿರುವ ರಸ್ತೆಯಲ್ಲಿ ಒಬ್ಬ ಅಸಾಮಿಯು ಒಂದು ತುಂಬಿದ ಪ್ಲಾಸ್ಟಿಕ್ ಚೀಲವನ್ನು ಹಿಡಿದಕೊಂಡು ಯಶವಂತಪುರ ಗ್ರಾಮದ ಕಡೆಗೆ ಹೋಗುತ್ತಿದ್ದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಹಿಡಿದ ಚೀಲವನ್ನು ಅಲ್ಲಿಯೇ ಬಿಟ್ಟು ಓಡಲು ಯತ್ನಿಸಿದಾಗ ಚಾಸಾ-1 ಮತ್ತು ನಾನು ಆತನನ್ನು ಹಿಂಬಾಲಿಸಿ ಹಿಡಿಯಲು ಹೋದಾಗ ಸಿಗದೇ ಆತನು ಯಾವುದೋ ಜಮೀನಿನ ಒಳಗೆ ಪರಾರಿಯಾಗಿರುತ್ತಾನೆ. ಅಲ್ಲೇ ಇದ್ದ ನಾಗರಾಜು ಬಿನ್ ದೊಡ್ಡಯ್ಯರವರನ್ನು ಓಡಿ ಹೋದ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಶಿವಸಿದ್ದಯ್ಯ ಬಿನ್ ಒನಕಾರಯ್ಯ, 55 ವರ್ಷ, ಯಶವಂತಪುರ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಆತ ಬಿಸಾಡಿದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿ ನೋಡಲಾಗಿ 90 ಎಂಎಲ್ ನ ಒರಿಜಿನಲ್ ಚಾಯಿಸ್ ಡಿಲಕ್ಸ ವಿಸ್ಕಿಯ 50 ಪೌಚುಗಳು ಇದ್ದದ್ದು ಕಂಡು ಬಂದಿದ್ದು ಯಾವುದೇ ಪರವಾನಗಿ ಇಲ್ಲದೇ ಹೆಚ್ಚಿನ ಲಾಭಕ್ಕಾಗಿ ಅಕ್ಕಪಕ್ಕದ ಗ್ರಾಮದ ಜನರಿಗೆ ಮಾರಾಟ ಮಾಡುವ ಬಗ್ಗೆ ತಿಳಿದು ಬಂದಿದ್ದು, ಮಾಲನ್ನು ಚಾಸಾ-10 ರವರಿಗೆ ಸಂಜೆ 5.30 ಗಂಟೆ ಸಮಯಕ್ಕೆ ಠಾಣೆಗೆ ತಂದು ಹಾಜರು ಮಾಡಿರುತ್ತೇವೆ. ಆರೋಪಿಯು ಎಸೆದಿದ್ದ ಬ್ಯಾಗಿನ ಒಳಗೆ 50 ಸಾರಾಯಿ ಪೌಚುಗಳ ಇದ್ದು ಅವುಗಳ ಪೈಕಿ 30 ಸಾರಾಯಿ ಪೌಚುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ತೆಗೆದು ಕಳುಹಿಸಿರುತ್ತೇವೆ. ವರದಿ ಬಂದ ನಂತರ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇವೆ. ಅವುಗಳು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಅವುಗಳನ್ನು ಮು.ಮಾ-1 ರಿಂದ 30 ಎಂದು ಗುರುತಿಸಲಾಯಿತು. ಆ ದಿನ

ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಅವರ ಪರ ವಕೀಲರು E/P ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಬಿ.ಎಂ ರವರಿಂದಃ**

ದಿನಾಂಕ 27.04.2021 ರಂದು ನಾನು ಹಗಲು ಕರ್ತವ್ಯದಲ್ಲಿದ್ದೆ. ದಿನಾಂಕ 27.04.2021 ರಂದು ಗ್ರಾಮಗಳ ಗಸ್ತು ಕರ್ತವ್ಯಕ್ಕೆ ಹೋಗಲು ಠಾಣೆ ಬಿಟ್ಟಾಗ ಮಧ್ಯಾಹ್ನ 2.30 ಗಂಟೆಯಾಗಿತ್ತು. ಸರಗೂರು ಪಟ್ಟಣ ಬಡಗಲಪುರ, ಹಾದನೂರು ಗ್ರಾಮಗಳ ಗಸ್ತು ಮಾಡಿ ಯಶವಂತಪುರ ಗ್ರಾಮಕ್ಕೆ ಗಸ್ತು ಹೋದಾಗ ಸಮಯ 4.00 ಗಂಟೆಯಾಗಿತ್ತು. ಗಸ್ತು ಹೋಗಲು ನಮ್ಮ ಸ್ವಂತ ಮೋಟರ್ ಸೈಕಲ್ ನಲ್ಲಿ ಹೋಗಿರುತ್ತೇವೆ. ನಿಮ್ಮ ಹೇಳಿಕೆಯಲ್ಲಿ ಬೈಕ್ ನಲ್ಲಿ ಗಸ್ತು ಹೋಗಿರುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿ. ಯಶವಂತಪುರ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ನೀವು ಮತ್ತು ಚಾಸಾ-1 ರವರ ಹೋದಾಗ ಒಬ್ಬ ಅಸಾಮಿಯು ನಿಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ ಎಂದು ಹೇಳಿದ್ದು ಅಂತರ ಎಷ್ಟು ಇತ್ತು ಎಂದು ಕೇಳಲಾಗಿ ಸಾಕ್ಷಿಯು ಅಂದಾಜು 100 ಮೀ ಅಂತರವಿತ್ತು ಎಂದು ನುಡಿಯುತ್ತಾರೆ. ನಾಗರಾಜು ಬಿನ್ ದೊಡ್ಡಯ್ಯರವರು ಯಶವಂತಪುರ ಗ್ರಾಮದವರು. ನಾಗರಾಜು ಎಂಬುವರು ಆರೋಪಿಯ ಹೆಸರನ್ನು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ ಆ ಮುಂಚೆ ಆತನ ಹೆಸರು ಗೊತ್ತಿರಲಿಲ್ಲ ಎಂದರೆ ಸರಿ. ಪ್ಲಾಸ್ಟಿಕ್ ಯಾವ ಬಣ್ಣದ್ದು ಎಂದರೆ ಸಾಕ್ಷಿಯು ಬಿಳಿ ಬಣ್ಣದ್ದು ಎಂದು ನುಡಿಯುತ್ತಾರೆ. ಬಿಳಿ ಪ್ಲಾಸ್ಟಿಕ್ ಚೀಲ ಎಂದು ಹೇಳಿಲ್ಲ ಎಂದರೆ ಸಾಕ್ಷಿಯು ಪ್ಲಾಸ್ಟಿಕ್ ಚೀಲ ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ದಿನಾಂಕ 27.04.2021 ರಂದು ನಾನು ಮತ್ತು ಚಾಸಾ-1 ರವರು ಸಂಜೆ 4.00 ಗಂಟೆ ಸಮಯಕ್ಕೆ ಯಶವಂತಪುರ ಗ್ರಾಮದ ಬಸ್ಸ ನಿಲ್ದಾಣ ಬಳಿ ಹೋಗಿದ್ದು ಅಲ್ಲಿ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಆತ ಹಿಡಿದಿದ್ದ ಪ್ಲಾಸ್ಟಿಕ್ ಚೀಲವನ್ನು ಅಲ್ಲೇ ಬೀಸಾಕಿ ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಠಾಣಾ ಕೇಸಿನ ಅಂಕಿ ಅಂಶ ತೋರಿಸಲು ಠಾಣೆಯಲ್ಲಿ ಕುಳಿತು ಆರೋಪಿಯ ವಿರುದ್ಧ ಪಿರ್ಯಾದು ನೀಡಿದ್ದು ಅವರಿಗೆ ಅನುಸರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**